**ಸಾಕ್ಷಿಯನ್ನು ದಿನಾಂಕಃ22.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಡಿ ಎಂ ವೈ ವಕೀಲರಿಂದಃ**

1. ಅಸಲು ದಾವಾ ಸಂಖ್ಯೆ 190/2017 ಅನ್ನು ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಸೇರಿ ಹಾಕಿದ್ದೆವು. ಆ ಕೇಸ್ ಎದುರುದಾರರ ಪರವಾಗಿ ಆಗಿತ್ತು. ಯಾವ ದಿನಾಂಕದಂದು ಕೇಸ್ ತೀರ್ಮಾನ ಆಗಿದೆ ಎಂದು ನಾನು ತಿಳಿದುಕೊಂಡಿಲ್ಲ. ದಿಃ11.10.2023 ರಂದು ತೀರ್ಮಾನ ಆಗಿದೆ ಎಂದರೆ ಸರಿ. ನಾನು ಆ ಕೇಸ್ ನಲ್ಲಿ ಡಿಕ್ರಿಯಾದ ಮೇಲೆ ಸುಮಾರು 1 ವಾರ ಅಥವಾ 15 ದಿನಗಳ ನಂತರ ಆಸ್ಪತ್ರೆಗೆ ಹೋಗಿದ್ದೆ. ಡಿಕ್ರಿಆಗಿ ನಾನು ಆಸ್ಪತ್ರೆಗೆ ಹೋದ ಸಮಯದ ನಡುವೆ 15 ದಿನ ಅಂತರ ಇತ್ತು. ನಾನು ಆಸ್ಪತ್ರೆಗೆ ಹೋದ ಬಗ್ಗೆದಾಖಲೆ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ದಾಖಲೆಯ ಪ್ರಕಾರ ದಿಃ16.07.2024 ರಂದು ಆಸ್ಪತ್ರೆಗೆ ಹೋಗಿದ್ದೇನೆಂದರೆ ಮೊದಲೇ ಹೋಗಿದ್ದೆ. ಅದಕ್ಕಿಂತ ಪೂರ್ವದಲ್ಲಿ ಆಸ್ಪತ್ರೆಗೆ ಹೋಗಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ದಾಖಲೆಯಲ್ಲಿ ನನಗೆ ಸ್ಟಂಟ್ ಹಾಕಿರುವ ಬಗ್ಗೆ ನಮೂದಾಗಿದೆ. ನಾನು ಹೇಳುವ ರೀತಿ ನನಗೆ ಯಾವುದೇ ಸ್ಟಂಟ್ ಹಾಕಿಲ್ಲ ಎಂದು ದಾಖಲೆಗಳು ಹೇಳುತ್ತಿವೆ ಎಂದರೆ ಸರಿಯಲ್ಲ. ನನಗೆಯಾವುದೇ ಹೃದಯ ರೋಗ ಇಲ್ಲ ಎಂದು ದಾಖಲೆಗಳು ಇದ್ದು, ನಾನು ಈ ಕೇಸ್ ಗೋಸ್ಕರ ದಾಖಲೆಗಳನ್ನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಅನಾರೋಗ್ಯವಾಗಿತ್ತು ಎಂದು ಹೇಳುವ ಕಾಲದಲ್ಲಿ ನನ್ನ ಹೆಂಡತಿ ಮಕ್ಕಳು ನಮ್ಮ ಊರಿನಲ್ಲಿ ನನ್ನ ಜೊತೆ ಒಂದೇ ಮನೆಯಲ್ಲಿ ವಾಸ ಇದ್ದರು ಎಂದರೆ ಸರಿ. ಅವರಿಗೆ ಮೇಲ್ಮನವಿ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಅವರು ನನ್ನ ಅನಾರೋಗ್ಯದ ನಿಮಿತ್ತ ನನ್ನನ್ನು ನೋಡಿಕೊಳ್ಳುತ್ತಿದ್ದರು. ನಾನು ಹೇಳಿರುವ ದಿನಾಂಕಕ್ಕೂ ಮತ್ತು ಹಾಜರು ಪಡಿಸಿರುವ ದಾಖಲೆಗಳಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಾವೆಯಲ್ಲಿ ತೀರ್ಪು ಆದಾಗ ನಾನು ಆರೋಗ್ಯವಾಗಿದ್ದೆ ಎಂದರೆ ಸರಿಯಲ್ಲ. ನಾವು ಉದ್ದೇಶಪೂರ್ವಕವಾಗಿ ಕಾಲಮಿತಿಯೊಳಗೆ ಮೇಲ್ಮನವಿ ಸಲ್ಲಿಸದೇ ಎದುರುದಾರರಿಗೆ ತೊಂದರೆ ಕೊಡಬೇಕೆಂದು ತಡವಾಗಿ ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಡಿಕ್ರಿಯಾದ ಕಾಲಕ್ಕೆ ನಾನು ಚೆನ್ನಾಗಿ ಇದ್ದು, ಎಳನೀರು ವ್ಯಾಪಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಕಾಲ ವಿಳಂಭಕ್ಕೆ ಸೂಕ್ತ ಕಾರಣ ಕೊಡದೇ ಇರುವ ಕಾರಣ ಈ ಅರ್ಜಿ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಮಗೆ ಕೇಸ್ ನಲ್ಲಿ ಯಾವುದೇ ತಿರುಳು ಇಲ್ಲದೇ ಇದ್ದರೂ ಸಹ ಎದುರುದಾರರಿಗೆ ತೊಂದರೆ ಕೊಡಬೇಕೆಂದು ತಡವಾಗಿ ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ದಿನಾಂಕಃ 11.10.2023 ರಿಂದ ದಿಃ 16.07.2024 ರ ವರೆಗೆ ಆರೋಗವಾಗಿದ್ದರೂ ಸಹ ಅನಾರೋಗ್ಯ ಆಗಿತ್ತು ಎಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.